**OS. 92/2015** **PW – 2**

**ಪ್ರಮಾಣೀಕರಿಸಲಾದ ದಿನಾಂಕ : 01.12.2025.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.K.S.R.I ವಕೀಲರಿಂದ :-**

ನನ್ನ ಪತ್ನಿಯ ಹೆಸರು ವೀಣಾ ದಿನೇಶ್. 1ನೇ ಪ್ರತಿವಾದಿಗೆ ಸೇರಿರುವ ಮನೆಯಲ್ಲಿ ನನ್ನ ಹೆಂಡತಿಯು ಬಾಡಿಗೆಗೆ ಇದ್ದು ಅದನ್ನು ಖಾಲಿ ಮಾಡಬೇಕು ಎಂದು ಅವರ ವಿರುದ್ಧ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಆಸ್ತಿಯ ಖಾತಾ ನಂಬರ್ ಆಗಲೀ ಅಥವಾ ವಿಸ್ತೀರ್ಣವಾಗಲೀ ನನಗೆ ತಿಳಿದಿಲ್ಲ. ದಿನಾಂಕಃ 31.12.2012 ರಲ್ಲಿ ಮಹಾಲಿಂಗಪ್ಪನವರು 1ನೇ ಪ್ರತಿವಾದಿಗೆ ಬರೆದು ಕೊಟ್ಟಿರುವ ಕ್ರಯಪತ್ರವನ್ನು ನಾನು ಇಲ್ಲಿಯವರೆಗೂ ನೋಡಿರುವುದಿಲ್ಲ. ಸದರಿ ಕ್ರಯಪತ್ರದಂತೆ ಪಶ್ಚಿಮದ ಕಡೆ ರೇವಣಸಿದ್ಧಪ್ಪನವರ ನಿವೇಶನದವರೆಗೂ ಬರೆದು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಮನೆಯಿಂದ ಪಶ್ಚಿಮವಾಗಿ ಅಳತೆ ಮಾಡಿದರೆ 17 ಅಡಿ ವಿಸ್ತೀರ್ಣವು ಎಲ್ಲಿಯವರೆಗೂ ಬರುತ್ತದೆ ಎಂಬುದು ನನಗೆ ತಿಳಿದಿಲ್ಲ. ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ಮಹಾಲಿಂಗಪ್ಪ 1ನೇ ಪ್ರತಿವಾದಿಯವರಿಗೆ ಬರೆದು ಕೊಟ್ಟಿದ್ದು ಪಶ್ಚಿಮದ ದಿಕ್ಕಿನಲ್ಲಿ ಯಾರಿದ್ದಾರೆ ಎಂಬುದು ನನಗೆ ತಿಳಿದಿಲ್ಲ. ಈ ದಾವಾ ಆಸ್ತಿಯಲ್ಲಿ ಪಶ್ಚಿಮದ ಕಡೆ ಏನೆಂದು ನಮೂದಾಗಿದೆ ಎಂಬುದು ನನಗೆ ತಿಳಿದಿಲ್ಲ. ಆದರೆ ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ 3 ½ ಅಡಿ ಅಗಲದಷ್ಟು ಓಡಾಡಲು ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ 3 ½ ಅಡಿಯಷ್ಟು ಓಡಾಡಲು ಜಾಗವಿದೆ ಎಂದು ತೋರಿಸುವುದಕ್ಕೆ ದಾಖಲಾತಿ ಇದ್ದು ಅದನ್ನು ನಾನು ನೋಡಿರುತ್ತೇನೆ. ಸಾಕ್ಷಿಯು ಮುಂದುವರಿದು ನಾನು ದಾಖಲೆಯನ್ನು ನೋಡಿರುವುದಿಲ್ಲ, ಆದರೆ ಜಾಗ ಇರುವುದನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಯಾವುದಾದರೂ ಕಛೇರಿಯಲ್ಲಿ ಸದರಿ 3 ½ ಅಡಿ ಜಾಗಕ್ಕೆ ಸಂಬಂಧಪಟ್ಟ ಹಾಗೇ ಏನೇದರೂ ನಡವಳಿಕೆಗಳು ನಡೆದಿದೆಯಾ ಎಂದು ಕೇಳಿದಾಗ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ವಾದಿಯು ಮನೆಯಿಂದ ಪಶ್ಚಿಮವಾಗಿ ರೇವಣಸಿದ್ದಪ್ಪನವರ ನಿವೇಶನದವರೆಗೂ ಪೂರ್ತಿ ಜಾಗವನ್ನು 1ನೇ ಪ್ರತಿವಾದಿಯು ಮಹಾಲಿಂಗಪ್ಪನವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹಾಗೆಂದು ಹೇಳುತ್ತಾರೆ, ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದ ಕಾರಣ ನಾನು ಹೇಳಿದಂತೆ ಯಾವ 3 ½ ಅಡಿ ಅಗಲದಷ್ಟು ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ನನ್ನ ಪತ್ನಿಯ ವಿರುದ್ಧದಾವೆಯನ್ನು ಹೂಡಿರುವ ಕಾರಣ ಅಲ್ಲಿ ಯಾವುದೇ ಜಾಗವಿಲ್ಲದಿದ್ದರೂ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಅಪರ ಸಿವಿಲ್ ನ್ಯಾಯಾಧೀಶರು, ತಿಪಟೂರು.**